**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ**

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ 080-22224212

**No.**DPAR 08 CHUVISA (MC) 2023 **Date:** 01.05.2023

# ಪತ್ರಿಕಾ ಪ್ರಕಟಣೆ

**1. ಗೈರು ಹಾಜರಿ ಮತದಾರರಿಗೆ ಮನೆಯಲ್ಲಿ ಮತದಾನ:**

ದಿನಾಂಕ 30.04.2023 ರಂದು 80+ ವರ್ಷ ಮೇಲ್ಪಟ್ಟ ವಯೋಮಾನದ **49,797** ಮತ್ತು **99,529** ವಿಶೇಷ ಚೇತನ ಮತದಾರರು ತಮ್ಮ ಮನೆಯಲ್ಲಿ ಮತ ಚಲಾಯಿಸಿದ್ದಾರೆ.

ಇಂದು ಇದಕ್ಕಾಗಿ **763** ತಂಡಗಳು **763** ಮಾರ್ಗಗಳಲ್ಲಿ ಸಂಚರಿಸಲಿವೆ. 80+ ವರ್ಷ ಮೇಲ್ಪಟ್ಟ ಮತ್ತು ವಿಶೇಷ ಚೇತನರಾದ **19,335** ಮತದಾರರು ಮನೆಗಳಲ್ಲಿ ಮತ ಚಲಾಯಿಸಲಿದ್ದಾರೆ.

**2. ಮಾದರಿ ನೀತಿ ಸಂಹಿತೆ ಚುನಾವಣಾ ವೆಚ್ಚ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಜಾರಿ:**

ಚುನಾವಣೆಯ ವಿವಿಧ ಜಾಗೃತ ದಳಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮಾದರಿ ನೀತಿ ಸಂಹಿತೆ, ಚುನಾವಣಾ ವೆಚ್ಚ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಉಲ್ಲಂಘಿಸಿರುವ ಕುರಿತು ದಿನಾಂಕ 29.03.2023 ರಿಂದ ಇಲ್ಲಿಯವರೆಗೆ ಈ ಕೆಳಗಿನ ಮಾಹಿತಿಗಳನ್ನು ಒದಗಿಸಲಾಗಿದೆ.

**ಅ. ವಶಪಡಿಸಿಕೊಂಡ ಸಂಚಿತ ವಿವರ: 01.05.2023:**

| ನಗದು | | |
|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | 82,83,660 | 91,00,20,007 |
| ಆದಾಯ ತೆರಿಗೆ ಇಲಾಖೆ | - | 20,11,70,290 |
| **ಒಟ್ಟು** | **82,83,660** | **1,11,11,90,297** |
| **ಉಚಿತ ಕೊಡುಗೆಗಳು** | | |
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | **5,11,750** | **22,33,44,782** |

| ಮದ್ಯ | | | | |
|---|---|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಲೀಟರ್) | ಮೌಲ್ಯ (ರೂ) | ಪ್ರಮಾಣ (ಲೀಟರ್ | ಮೌಲ್ಯ (ರೂ) |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | 180.39 | 58,290 | 60,239.95 | 1,34,15,437.83 |
| ಅಬಕಾರಿ ಇಲಾಖೆ | 5,629.00 | 22,85,939 | 19,02,092.20 | 72,79,12,018.00 |
| **ಒಟ್ಟು** | **5,809.39** | **23,44,229** | **19,62,332.146** | **74,13,27,456** |

| ಡ್ರಗ್ಸ್/ಮಾದಕ ದ್ರವ್ಯಗಳು | | | | |
|---|---|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಕೆ.ಜಿ) | ಮೌಲ್ಯ (ರೂ | ಪ್ರಮಾಣ (ಕೆ.ಜಿ) | ಮೌಲ್ಯ (ರೂ |
| **ವಿಚಕ್ಷಣ ದಳ/ಸ್ಥಿರ ಕಣ್ಗಾವಲು, ಪೊಲೀಸ್ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳು** | **209.53** | **2,70,16,500** | **1,662.28** | **21,13,92,326.00** |

| ಬೆಲೆ ಬಾಳುವ ಲೋಹಗಳು | | | | |
|---|---|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಕೆ.ಜಿ) | ಮೌಲ್ಯ (ರೂ) | ಪ್ರಮಾಣ (ಕೆ.ಜಿ) | ಮೌಲ್ಯ (ರೂ) |
| ಬಂಗಾರ ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು) | 0 | - | 123.19 | 62,05,49,533.00 |
| ಬಂಗಾರ (ಆದಾಯ ತೆರಿಗೆ ಇಲಾಖೆ) | 0.00 | - | 26.23 | 13,99,68,687.00 |
| **ಒಟ್ಟು ಬಂಗಾರ** | **0.00** | **-** | **149.42** | **76,05,18,220** |
| ಬೆಳ್ಳಿ (ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು) | 0.76 | 50,000 | 607.69 | 4,20,78,276.40 |
| ಬೆಳ್ಳಿ ಆದಾಯ ತೆರಿಗೆ ಇಲಾಖೆ | 0.00 | **-** | 36.85 | 27,31,000.00 |
| **ಒಟ್ಟು ಬೆಳ್ಳಿ** | **0.76** | **50,000** | **644.54** | **4,48,09,276** |
| **ಒಟ್ಟು ಬಂಗಾರ, ಬೆಳ್ಳಿ** | **0.76** | **50,000** | **793.96** | **80,53,27,496** |

| | |
|---|---|
| **ನಿನ್ನೆ ದಿನ ವಶಕ್ಕೆ ಪಡೆದ ಸಂಚಿತ *(ಮೌಲ್ಯ ರೂ.)*** | **3,82,06,139** |
| **ವಶಕ್ಕೆ ಪಡೆದ ಒಟ್ಟು ಸಂಚಿತ *(ಮೌಲ್ಯ ರೂ.)*** | **309,25,82,357** |

**ಆ. ಪ್ರಕರಣ ದಾಖಲು:**

- ನಗದು, ಮದ್ಯ, ಮಾದಕ ದ್ರವ್ಯ, ಬೆಲೆಬಾಳುವ ಲೋಹ ಮತ್ತು ಉಡುಗೊರೆ ವಸ್ತುಗಳನ್ನು ವಶಪಡಿಸಿಕೊಂಡಿರುವ ವಿಚಕ್ಷಣ ದಳ, ಸ್ಥಿರ ಕಣ್ಗಾವಲು ತಂಡಗಳು ಮತ್ತು ಪೊಲೀಸ್ ಅಧಿಕಾರಿಗಳು **2,390** ಪ್ರಥಮ ತನಿಖಾ ವರದಿ (FIR) ದಾಖಲಿಸಿದ್ದಾರೆ.
- ಚುನಾವಣೆ ಘೋಷಣೆಯಾದ ದಿನಾಂಕದಿಂದ ಇಲ್ಲಿಯವರೆಗೆ ಒಟ್ಟಾರೆ **69,825** ಶಸ್ತ್ರಾಸ್ತ್ರಗಳನ್ನು ಜಮೆ ಮಾಡಿಸಿಕೊಳ್ಳಲಾಗಿದೆ, 18 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. 20 ಶಸ್ತ್ರಾಸ್ತ್ರಗಳ ಪರವಾನಿಗೆ ರದ್ದು ಪಡಿಸಲಾಗಿದೆ. ಸಿಆರ್‌ಪಿಸಿ ಕಾಯ್ದೆಯಡಿ **5,522** ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ **10,077** ವ್ಯಕ್ತಿಗಳಿಂದ ಮುಚ್ಚಳಿಕೆ ಪತ್ರ ಪಡೆಯಲಾಗಿದೆ. ಚುನಾವಣೆ ಘೋಷಣೆಯಾದ ದಿನದಿಂದ ಇಲ್ಲಿಯವರೆಗೆ **15,456** ಜಾಮೀನು ರಹಿತ ವಾರೆಂಟ್‌ಗಳನ್ನು ಜಾರಿಗೊಳಿಸಲಾಗಿದೆ.
- ಅಬಕಾರಿ ಇಲಾಖೆಯು **3,095** ಗಂಭೀರ ಪ್ರಕರಣಗಳನ್ನು ಹಾಗೂ **2,852** ಮದ್ಯದ ಪರವಾನಿಗೆ ಉಲ್ಲಂಘಿಸಿದ ಪ್ರಕರಣಗಳು, **90** ಎನ್‌ಡಿಪಿಎಸ್ ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ ಒಟ್ಟು **27,611** ಪ್ರಕರಣಗಳನ್ನು ದಾಖಲಿಸಿದೆ ಮತ್ತು **2,124** ವಿವಿಧ ಮಾದರಿಯ ವಾಹನಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.

**ಆ. ವಿಶೇಷ ವರದಿ:**

- ವಿಚಕ್ಷಣ ದಳವು ಬೆಂಗಳೂರು ನಗರ ಪೂರ್ವ ಜಿಲ್ಲೆಯ ಪುಲಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ರೂ. **1,02,50,000** ಮೌಲ್ಯದ **205** ಕೆ.ಜಿ ಡ್ರಗ್ಸ್ (ಮಾದಕ ಪದಾರ್ಥ) ವಶಪಡಿಸಿಕೊಂಡಿದೆ.
- ವಿಚಕ್ಷಣ ದಳವು ಬೆಂಗಳೂರು ನಗರ ದಕ್ಷಿಣ ಜಿಲ್ಲೆಯ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ ರೂ. **1,50,62,000** ಮೌಲ್ಯದ **2.67** ಕೆ.ಜಿ ಡ್ರಗ್ಸ್ (ಮಾದಕ ಪದಾರ್ಥ) ವಶಪಡಿಸಿಕೊಂಡಿದೆ.
- ಸ್ಥಿರ ಕಣ್ಗಾವಲು ಪಡೆ ಬೆಂಗಳೂರು ನಗರ ದಕ್ಷಿಣ ಜಿಲ್ಲೆಯ ಬೆಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ರೂ. **61,40,300** ನಗದು ವಶಪಡಿಸಿಕೊಂಡಿದೆ.

**3. ಸಾರ್ವಜನಿಕ ಕುಂದುಕೊರತೆಗಳ ಇತ್ಯರ್ಥ:**

ಮತದಾರರ ಸಹಾಯವಾಣಿ ಮೂಲಕ ಸ್ವೀಕರಿಸಲಾದ **22,495** ಕರೆಗಳಲ್ಲಿ **21,698** ಸಾರ್ವಜನಿಕರು ಮಾಹಿತಿ ಕೋರಿದ್ದಾರೆ. 34 ಜನರು ಪ್ರತಿಕ್ರಿಯೆ (ಫೀಡ್‌ಬ್ಯಾಕ್) ನೀಡಿದ್ದಾರೆ. **37** ಜನರು ಸಲಹೆಗಳನ್ನು

ನೀಡಿದ್ದಾರೆ ಮತ್ತು **726** ಜನರು ದೂರುಗಳನ್ನು ದಾಖಲಿಸಿದ್ದಾರೆ. ಕರೆಗಳ ಮೂಲಕ ಸ್ವೀಕರಿಸಿದ ಎಲ್ಲಾ **22,495** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ. ಇದಲ್ಲದೇ ಎನ್‌ಜಿಆರ್‌ಎಸ್ ಪೋರ್ಟ್‌ನಲ್ಲಿ **9,366** ದೂರುಗಳನ್ನು ನಾಗರಿಕರು ನೋಂದಾಯಿಸಿದ್ದು ಇವುಗಳಲ್ಲಿ **9,081** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ.

**4. ಸಿ–ವಿಜಿಲ್:**

ಸಿ–ವಿಜಿಲ್ ಅಪ್ಲೀಕೇಷನ್ ಮೂಲಕ **11,866** ದೂರು ಸ್ವೀಕರಿಸಲಾಗಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪರವಾನಿಗೆ ಇಲ್ಲದ ಪೋಸ್ಟರ್/ಬ್ಯಾನರ್ ಅಂಟಿಸಿದ ಪ್ರಕರಣಗಳು **6,712** ಹಣ ಹಂಚಿಕೆ ಪ್ರಕರಣಗಳು **107,** ಕಡ್ಡಾಯವಾಗಿ ಮಾಡಬೇಕಾದಲ್ಲದ ಪೋಸ್ಟರ್ ಪ್ರಕರಣಗಳು **188,** ಬಂದೂಕುಗಳ ಪ್ರದರ್ಶಿಸಿ ಬೆದರಿಸಿದ ಪ್ರಕರಣಗಳು **69,** ಉಡುಗೊರೆ, ಕೂಪನ್ ಹಂಚಿಕೆ ಪ್ರಕರಣಗಳು **115,** ಮದ್ಯ ಹಂಚಿಕೆ ಪ್ರಕರಣಗಳು **87,** ಆಸ್ತಿ ಹಾನಿಗೊಳಿಸಿದ ಪ್ರಕರಣಗಳು **420,** ಪರವಾನಿಗೆ ಇಲ್ಲದ ವಾಹನ ಅಥವಾ ಬೆಂಗಾವಲು ಪಡೆ ಪ್ರಕರಣಗಳು **189,** ದಾಖಲಾಗಿದ್ದು, ಈ ಪೈಕಿ **10,740** ದೂರುಗಳು ನಿಜವೆಂದು ಕಂಡುಬಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

**5. ಮಾಧ್ಯಮ:**

ವಿವಿಧ ಮಾಧ್ಯಮಗಳ ಮೂಲಕ ದೂರುಗಳನ್ನು ಸ್ವೀಕರಿಸಲಾಗಿದ್ದು, ಇಮೇಲ್ ಮೂಲಕ **373** ಮತ್ತು ಪತ್ರಗಳ ಮೂಲಕ **658** ಸುದ್ದಿಪತ್ರಿಕೆಗಳಿಂದ **151,** ಟಿ.ವಿ ಚಾನಲ್‌ಗಳಿಂದ **61** ಮತ್ತು ಸಾಮಾಜಿಕ ಜಾಲತಾಣಗಳಿಂದ **87** ಸೇರಿದಂತೆ ಒಟ್ಟು **1,330** ದೂರುಗಳು ಬಂದಿದ್ದು **1,105** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

**6. ಸುವಿಧಾ:**

ಸುವಿಧಾ ಅಡಿಯಲ್ಲಿ ವಿವಿಧ ಅನುಮತಿಗಳನ್ನು ಕೋರಿ ಇವರೆಗೆ ಒಟ್ಟು **18,733** ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅದರಲ್ಲಿ **15,828** ಅರ್ಜಿಗಳಿಗೆ ಅನುಮತಿ ನೀಡಲಾಗಿದ್ದು, **1,942** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅವುಗಳಲ್ಲಿ **123** ಅರ್ಜಿಗಳು ಪ್ರಗತಿಯಲ್ಲಿವೆ. **473** ಬಾಕಿ ಉಳಿದಿದ್ದು, **367** ಅರ್ಜಿಗಳು ರದ್ದಾಗಿರುತ್ತವೆ.

******